ಸೂಳೆಕೋಟೆಯ ಬಳಿ ದ್ವಿಪಥದ ಸೇತುವೆ ನಿರ್ಮಾಣವಾಗಿರುತ್ತದೆ. ಸದರಿ ಸೇತುವೆಯು ಹೆಬ್ಬಾಳೆ ಸೂಳೆಕೋಟೆಯ ಜಿಲ್ಲಾ ಮುಖ್ಯ ರಸ್ತೆಯ ಚೈನೇಜ್ 0.00 ಕಿಮೀ ರಲ್ಲಿ ನಿರ್ಮಾಣವಾಗಿರುತ್ತದೆ. ರಸ್ತೆಯ ವಾಹನ ಸಾಂದ್ರತೆಯು 350 ಪಿ.ಸಿ.ಯೂ. ಇರುತ್ತದೆ.

ಸದರಿ ಸೇತುವೆಯ ಕಾಮಗಾರಿಯನ್ನು 1997ರ ವರ್ಷ ದಲ್ಲಿ ಪ್ರಾರಂಭಿಸಿ 2000ನೇ ವರ್ಷದಲ್ಲಿ ಪೂರ್ಣಗೊಳಿಸಲಾಗಿರುತ್ತದೆ. ಈ ಸೇತುವೆಯ ಅಂದಾಜು ಮೊತ್ತ ರೂ.42.00 ಗಳಾಗಿರುತ್ತದೆ. ಸದರಿ ಸೇತುವೆಯ ಕೂಡು ರಸ್ತೆಯು ಹೆಚ್ಚುವರಿ ನೀರಿನ ಹರಿವಿನಿಂದಾಗಿ 9 ಮೀ ಅಗಲದ ಏರಿಯಲ್ಲಿ 3.5 ಅಗಲದ ಏರಿಯು ಜರಿದಿದ್ದು, ಪ್ರಸ್ತುತ ಕೂಡು ರಸ್ತೆ 5 ಮೀ ಅಗಲ ಇರುತ್ತದೆ.

ಈ ಭಾಗದಲ್ಲಿ ದ್ವಿಚಕ್ರ, ನಾಲ್ಕು ಚಕ್ರ ಹಾಗೂ ಟ್ರ್ಯಾಕ್ಟರ್‌ಗಳು ಓಡಾಡುತ್ತಿರುತ್ತವೆ. ಸದರಿ ಹಾನಿಗೊಳಗಾದ ಏರಿಯ ಭಾಗದ ದುರಸ್ತಿಯು ಸೇರಿದಂತೆ ರಸ್ತೆಯ ಅಭಿವೃದ್ಧಿಗಾಗಿ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮುಖ್ಯ ಇಂಜಿನಿಯರ್ ರವರಿಗೆ ಸೂಚಿಸಲಾಗಿದೆ. ಪ್ರಸ್ತಾವನೆ ಸ್ವೀಕೃತವಾದ ನಂತರ ಅನುದಾನದ ಲಭ್ಯತೆಯನ್ನಾಧರಿಸಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು.

ಸೇತುವೆ ನಿರ್ಮಾಣದ ಕಾಮಗಾರಿ

485 (20) ಶ್ರೀ ಅಪ್ಪಾಜಿ ಚನ್ನಬಸವರಾಜ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ರಾಷ್ಟ್ರೀಯ ಹೆದ್ದಾರಿ–13 ನಿಡಗುಂದಿ–ಬಸರಕೋಡು ರಸ್ತೆಯಲ್ಲಿನ ಕಿ.ಮೀ.10.8 ರಲ್ಲಿನ (ಬಡವಟಗಿ–ಒಳಪಟ್ಟ) ಸೇತುವೆ ನಿರ್ಮಾಣದ ಕಾಮಗಾರಿಯನ್ನು ಸುಮಾರು ರೂ.100 ಲಕ್ಷಗಳನ್ನು ಅಂದಾಜಿನಲ್ಲಿ ತೆಗೆದು ಕೊಳ್ಳಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ ಈ ಕಾಮಗಾರಿಯು ಆಯವ್ಯಯ ಪಟ್ಟಿಯಲ್ಲಿ ಪ್ರಕಟಗೊಂಡಿದ್ದಾಗ್ಯೂ ಆಡಳಿತ ಮಂಜೂರಾತಿಯನ್ನು ನೀಡದಿರಲು ಕಾರಣವೇನು?

ಇ) 2009–10ರಲ್ಲಿನ ಅಪೆಂಡಿಕ್ಸ್–ಇ ಆಯವ್ಯಯ ಪುಸ್ತಕದಲ್ಲಿ ಮೇಲ್ಕಂಡ ಕಾಮಗಾರಿಯನ್ನು ಪ್ರಕಟಿಸದೇ ಇರುವುದರ ಉದ್ದೇಶವೇನು?

ಈ) ಈ ಕಾಮಗಾರಿಯನ್ನು ತ್ವರಿತಗತಿಯಿಂದ ಪೂರ್ಣಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ರಾಜ್ಯ ಹೆದ್ದಾರಿ–13 ನಿಡಗುಂದಿ–ಬಸರಕೋಡ್ ರಸ್ತೆಯಲ್ಲಿನ ಸೇತುವೆ ನಿರ್ಮಾಣದ ಕಾಮಗಾರಿಯನ್ನು ಸುಮಾರು ರೂ.100 ಲಕ್ಷಗಳ ಅಂದಾಜಿನಲ್ಲಿ ತೆಗೆದು ಕೊಳ್ಳಬೇಕಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಮೇಲಿನ ಕಾಮಗಾರಿಯ ರೂ.100 ಲಕ್ಷ ಮೊತ್ತದ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ಉ), ಧಾರವಾಡ ಇವರಿಗೆ ಸೂಚಿಸಲಾಗಿದೆ.

ಇ) ಮೇಲಿನ ಕಾಮಗಾರಿಯು 2009–10ನೇ ಸಾಲಿನ ರಸ್ತೆ ಮತ್ತು ಸೇತುವೆಗಳ ಆಯವ್ಯಯ ಪಟ್ಟಿಯಲ್ಲಿ ರೂ. 100 ಲಕ್ಷಗಳ ಅಂದಾಜು ಮೊತ್ತ ಹಾಗೂ ರೂ.30 ಲಕ್ಷಗಳ ಅನುದಾನದೊಂದಿಗೆ ಸೇರ್ಪಡೆಯಾಗಿರುತ್ತದೆ.

ಈ) ಈ ಕಾಮಗಾರಿಯ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ನೀಡಿ ಶೀಘ್ರದಲ್ಲಿ ಗುತ್ತಿಗೆ ಕರೆಯಲು ಕ್ರಮ ಕೈಗೊಳ್ಳಲಾಗುವುದು.

ಸಹಕಾರ ಸಂಘದಲ್ಲಿ ಅವ್ಯವಹಾರ

486 (771) ಶ್ರೀ ಅಶ್ವತ್ಥ್, ಶ್ರೀ ಹೆಚ್.ಸಿ.ಬಾಲಕೃಷ್ಣ ಮತ್ತು ಶ್ರೀ ಕೆ.ರಾಜು : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಡೆದಿದ್ದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಜ್ಯೇಷ್ಠತೆಯನ್ನು ಕಡೆಗಣಿಸಿ ನೀಡಲಾಗಿದ್ದ 150 ನಿವೇಶನಗಳಲ್ಲಿ 110 ನಿವೇಶನಗಳನ್ನು ಅರ್ಹರಾದವರಿಗೆ ಮರುಹಂಚಿಕೆ ಮಾಡಲಾಗಿದೆಯೇ? ಮರುಹಂಚಿಕೆ ಮಾಡಿರುವ 110 ಸದಸ್ಯರ ವಿಳಾಸ ದೊಂದಿಗೆ ಸಂಪೂರ್ಣ ವಿವರ ನೀಡುವುದು?

ಆ) ಉಳಿದ 40 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆಯೇ? ಮಾಹಿತಿ ನೀಡುವುದು?

ಇ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು?